ತಮ್ಮತನವನ್ನು ಕಂಡುಕೊಳ್ಳಲು ಮತ್ತು ತೋರಲು ಇದ್ದ ಮುಕ್ತತೆಯೇ ಅವರಿಗೆ ಬಸವಣ್ಣನೆಡೆಗೆ ಗೌರವ ಮೂಡಲು ಕಾರಣವಾಗಿರಬಹುದು. ಆತನ ನುಡಿಗಿಂತ ನಡೆ ಅವರಿಗೆ ಮುಖ್ಯವಾಗಿರಬಹುದು. ಇದನ್ನು ಇನ್ನಷ್ಟು ಹಿಗ್ಗಿಸುವುದಾದರೆ, ಬಸವಾದಿಗಳು ಶರಣೆಯರ ಮಾತಿಗೆ ಕಿವಿಗೊಟ್ಟು ತಮ್ಮನ್ನು ತಾವು ತಿದ್ದಿಕೊಂಡಿರುವ ಸಾಧ್ಯತೆಗಳೂ ಕಾಣಿಸುತ್ತವೆ.

ಸಂವಾದದ ಈ ಹೊಸ ಸಾಧ್ಯತೆಯ ಪ್ರಕ್ರಿಯೆಯಲ್ಲಿ ಬಸವಾದಿಗಳ ಪ್ರಭಾವ ಶರಣೆಯರ ಮೇಲೆ ಎಷ್ಟು ಆಗಿದೆಯೋ, ಶರಣೆಯರ ಪ್ರಭಾವವೂ ಬಸವಾದಿಗಳ ಮೇಲೆ ಆಗಿರುವ ಸೂಚನೆಗಳಿವೆ. ಹೆಣ್ಣನ್ನು ಕುರಿತಾಗಿ ಶರಣರು ಮರುಚಿಂತನೆ ಮಾಡುವಂತೆ ಪ್ರೇರೇಪಿಸುವ ರೀತಿಯಲ್ಲಿ ಅವರು ಸಂವಾದದಲ್ಲಿ ಪಾಲ್ಗೊಂಡಿದ್ದಾರೆ. ಭಕ್ತರ ಬೂಟಾಟಿಕೆಯನ್ನು ಖಂಡಿಸಿದ್ದಾರೆ.

**‘ಭಕ್ತನಾದೆನೆಂಬವರೆಲ್ಲ ಭವಿಗಳಾದರು ನೋಡಾ/ ಜಂಗಮವಾದೆನೆಂಬವರೆಲ್ಲ ಜಗಭಂಡರಾದರು ನೋಡಾ/ ಲಿಂಗೈಕ್ಯನಾದೆನೆಂಬವರೆಲ್ಲ ಅಂಗವಿಕಾರಿಗಳಾದರು ನೋಡಾ. ಅಮುಗೇಶ್ವರಲಿಂಗವನರಿಯದಜ್ಞಾನಿಗಳ/ ಲಿಂಗೈಕ್ಯರೆಂದಡೆ ಅಘೋರನರಕ ತಪ್ಪದು’**

ಎನ್ನುತ್ತಾಳೆ ಅಮುಗೆ ರಾಯಮ್ಮ. ‘ಹೆಣ್ಣು ಬಿಟ್ಟು ಲಿಂಗವನೊಲಿಸಬೇಕೆಂಬರು / ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೇ?’ ಎಂಬ ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀಯ ಪ್ರಶ್ನೆಯೊಂದನ್ನು ನೋಡಿದರೂ ಅವರ ಸ್ಪಷ್ಟತೆ ಎದ್ದು ತೋರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ವಚನಗಳಲ್ಲಿ ಪುನರಾವರ್ತಿತವಾಗಿ ಬರುವ ಬಲ್ಲಾಳನ ಕಥೆಯನ್ನು ಶರಣೆಯರು ನಿರ್ವಹಿಸಿದ ಕ್ರಮ ನೋಡಿದರೆ ಇದು ಇನ್ನಷ್ಟು ಖಚಿತವಾಗುತ್ತದೆ. ಸಿಂಧು ಬಲ್ಲಾಳನನ್ನು ಪರೀಕ್ಷಿಸಲು ಜಂಗಮ ವೇಷಧಾರಿಯಾಗಿ ಬರುವ ಶಿವ ಅವನ ಹೆಂಡತಿಯನ್ನು ಬಯಸುತ್ತಾನೆ. ಶಿವ ಏನು ಬಯಸಿದರೂ ನಿರಾಕರಿಸಬಾರದು ಎಂಬ ನಿಲುವು ಭಕ್ತರದು. ಅದನ್ನು ಸ್ಥಾಪಿಸುವುದಕ್ಕಾಗಿಯೇ ಭಕ್ತ ಸಿರಿಯಾಳ, ಸಿಂಧು ಬಲ್ಲಾಳರ ಕತೆ ಇದೆ. ಜಂಗಮರೆಲ್ಲರೂ ಸಾಕ್ಷಾತ್ ಶಿವನ ಅವತಾರಿಗಳು ಎಂಬ ವಿವೇಚನೆಯಿಲ್ಲದ ನಿಲುವನ್ನು ಶರಣೆಯರು ಉಗ್ರವಾಗಿ ಖಂಡಿಸುತ್ತಾರೆ. ಆದರೆ ಶರಣರು ಅದನ್ನು ಆರಾಧನಾಭಾವದಲ್ಲಿ ಬರೆಯುತ್ತಾರೆ. ಬಸವಣ್ಣ ಎಲ್ಲರಿಗಿಂತ ಒಂದು ಹೆಜ್ಜೆ ಮುಂದೆ ಹೋಗುತ್ತಾನೆ:

**ಎನ್ನ ಸತಿ ನೀಲಲೋಚನೆ ಪೃಥ್ವಿಗಗ್ಗಳ ಚಲುವೆ / ಆಕೆಯನು ಸಂಗಮದೇವಾ, ನೀ ಜಂಗಮ ರೂಪಾಗಿ ಬಂದು / ಎನ್ನ ಮುಂದೆ ಸಂಗವ ಮಾಡುತ್ತಿರಲು / ಎನ್ನೊಡನಿದ್ದ ಸತಿಯೆಂದು ಮಾಯಕ್ಕೆ ಮರುಗಿದೆನಾದರೆ / ನಿಮ್ಮಾಣೆ ನಿಮ್ಮ ಪ್ರಮಥರಾಣೆ ಮನದೊಡೆಯ**

ಶರಣೆಯರು ಇದಕ್ಕೆ ವಿರುದ್ಧ ನೆಲೆಯಲ್ಲಿ ಖಂಡನೆಯೊಂದಿಗೆ ತಮ್ಮ ಮಂಡನೆ ಮಾಡುತ್ತಾರೆ. ಇದನ್ನವರು ಮತ್ತೆ ಮತ್ತೆ ಮಾಡುತ್ತಾರೆ. ಸತ್ಯಕ್ಕನ ವಚನ ಹೀಗಿದೆ:

**ನಿಮ್ಮ ಹಿರಿಯತನಕ್ಕಿದು ಪಥವೆ, / ಬಲ್ಲಾಳನ ವಧುವ ಬೇಡುವುದು? / ನಿಮ್ಮ ಗುರುತನಕ್ಕಿದು ಪಥವೆ, / ನಾರಿಯರಿಬ್ಬರೊಡನೆ ಇಪ್ಪುದು? / ಶಿವ ಶಿವಾ ನಿಮ್ಮ ನಡವಳಿ!**

ಬಹುಶಃ ಹೀಗೆ ದಿಟ್ಟವಾಗಿ ಹೇಳುವ ಅವಕಾಶವನ್ನು ಅತ್ಯಂತ ಸಮರ್ಥವಾಗಿ ಬಳಸಿಕೊಂಡ ಶರಣೆಯರ ಪ್ರಯತ್ನದ ಫಲವಾಗಿ ಬಸವನಲ್ಲೂ ಬದಲಾವಣೆ ಆಗಿರಬೇಕು.

**ಎಲ್ಲಿ ಹೊಕ್ಕಲ್ಲಿ ನಿನ್ನ ವಿಕಾರವ ಬಿಡೆ, ಮಾಣೆ, ಗರುವತನವೆ? / ದಾಸನ ವಸ್ತ್ರವ ಸೀಳುವುದೊಂದು ಗರುವತನವೆ? / ಸಿರಿಯಾಳನ ಮಗನ ಬೇಡುವುದೊಂದು ಗರುವತನವೆ? / ಬಲ್ಲಾಳನ ವಧುವ ಬೇಡುವುದೊಂದು ಗರುವತನವೆ? ಕೋಡಗವ ಹುಲ್ಲಲಿ ಮುಸುಕಿದಂತೆ / ಕೂಡಲಸಂಗಮದೇವಾ, ನಿನ್ನ ಪರಿ.**

ಎನ್ನುವಲ್ಲಿ ಇದನ್ನು ಗಮನಿಸಬಹುದು. ಇಷ್ಟಕ್ಕೇ ನಿಲ್ಲದೆ ನಿಜದಲ್ಲಿ ತನ್ನೊಳಗೆ ತಾನು ಸತಿತನವನ್ನು ಆವಾಹಿಸಿಕೊಳ್ಳುವ ಬಸವಣ್ಣ, ಹೆಣ್ಣು ಯಾವುದೇ ಗಂಡನ್ನು ಒಪ್ಪುವುದೆಂದರೆ ಅದು ದೇಹಕ್ಕಿಂತ ಮನಸ್ಸಿಗೆ ಸಂಬಂಧಿಸಿದ ಸಂಗತಿ ಎಂಬುದನ್ನು ಹೆಣ್ಣೇ ತಾನಾಗಿ ಹಾಡುತ್ತಾನೆ. ಹೀಗೆ ಹೆಣ್ಣೇ ತಾನಾಗುವುದು ಪುರುಷಾಹಂಕಾರವನ್ನು ಮೀರುವ ಒಂದು ಪರಿಯೇ ಆಗಿದೆ. ಅದಕ್ಕಾಗಿ ಬಸವಣ್ಣ ಹಾದು ಬಂದ ದಾರಿ ಕಠಿಣವಾದುದು. ತನ್ನನ್ನು ತಾನು ಬದಲಿಸಿಕೊಳ್ಳಲು ಪಣ ತೊಡದೇ ಇದು ಸಾಧ್ಯವಿಲ್ಲ. ಆ ಕಾರಣಕ್ಕೆ ಈ